ಈ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲು ಕೂಡಲೇ ಕ್ರಮ ಕೈಗೊಳ್ಳ ಲಾಗುವುದೇ?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

Yes.

ಆ) ಈ ಬಗ್ಗೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಸ್ಥಳ ಪರಿಶೀಲನಾ ವರದಿ ತರಿಸಲು ಪತ್ರ ಬರೆಯಲಾಗಿದೆ. ಸಮಿತಿಯಿಂದ ವರದಿ ಬಂದ ನಂತರ ಅಗತ್ಯವಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

District Tourisum Promotion Council has been asked to submit a spot inspection report of these places. After obtaining the report from the committee, if necessary, action will be taken in this regard.

ಇ) ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

There is no such proposal in the Department.

ಈ) ಅನ್ವಿಯಿಸುವುದಿಲ್ಲ.

Does not arise.

755 **ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) :** ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ನಕಲಿ ಮದ್ಯಗಳನ್ನು ತಯಾರಿಸಿ ಗ್ರಾಮಗಳಲ್ಲಿ ಮಾರಾಟ ಮಾಡಿ ಬಡ ಕುಟುಂಬ ಹಾಗೂ ಕೂಲಿಕಾರರನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದಿಂದ ಯಾವುದೇ ಪರವಾನಗಿಯೂ ಇಲ್ಲದೇ ನಕಲಿ ಮದ್ಯ ತಯಾರಿಸಿ ಮಾರಾಟವನ್ನು ಮಾಡುತ್ತಿರುವುದು ಅಬಕಾರಿ ಇಲಾಖೆಯ ಅಧಿಕಾರಿಯವರಿಗೆ ತಿಳಿದಿದ್ದರೂ ಸಹಾ ಇವರು ಶಾಮೀಲಾಗಿರುವುದು ನಿಜವಲ್ಲವೆ;

ಇ) ಈ ನಕಲಿ ಮದ್ಯ ತಯಾರಿಕಾ ಮತ್ತು ಮಾರಾಟಗಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಿಜವಲ್ಲ.

ಇ) ನಕಲಿ ಮದ್ಯ ತಯಾರಿಕೆ ಮತ್ತು ಮಾರಾಟಗಾರರ ವಿರುದ್ಧ ಕಟ್ಟುನಿಟ್ಟಿನ ಜಾರಿ ಕ್ರಮ ಕೈಗೊಳ್ಳಲ್ಲಾಗುತ್ತಿದೆ. ಈ ಬಗ್ಗೆ ಗೌರಿಬಿದನೂರು ತಾಲ್ಲೂಕಿನಲ್ಲಿ 2008–09ರಲ್ಲಿ 68 ಅಬಕಾರಿ ದಾಳಿ ನಡೆಸಿದ್ದು, 26 ಮೊಕದ್ದಮೆಗಳನ್ನು ದಾಖಲಿಸಿಕೊಂಡು, 14 ಜನ ಆರೋಪಿಗಳನ್ನು ಬಂಧಿಸಲಾಗಿದೆ. 108.900ಲೀ. ಮದ್ಯ, 23.040 ಲೀ. ನಕಲಿ ಮದ್ಯ, 605ಲೀ. ಸೇಂದಿ, 20ಲೀ. ಕಳ್ಳಭಟ್ಟಿ ಸಾರಾಯಿ 175 ಲೀ. ಬ್ಲೆಂಡ್ (ನಕಲಿ), 11 ವಾಹನಗಳನ್ನು ಮತ್ತು ನಕಲಿ ಮದ್ಯ ತಯಾರಿಕಾ ಸಾಮಗ್ರಿಗಳನ್ನು ವಶಪಡಿಸಿಕೊಂಡು 1060ಲೀ. ಕೊಳೆಯನ್ನು ನಾಶಪಡಿಸಲಾಗಿದೆ.

972 ಶ್ರೀ ಮಂಜುನಾಥ್ ಹೆಚ್.ಪಿ. : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ವನ್ಯಜೀವಿ ವಿಭಾಗಕ್ಕೆ 2007 ರಿಂದ ಈವರೆಗೂ (ಜುಲೈ 2009) ವಿವಿಧ ಯೋಜನೆಗಳಡಿಯಲ್ಲಿ ಸರ್ಕಾರದಿಂದ ಬಿಡುಗಡೆಗೊಂಡ ಅನುದಾನದ ಹಾಗೂ ಖರ್ಚಾದ ವೆಚ್ಚವೆಷ್ಟು;

ಆ) ಈ ಅನುದಾನದಲ್ಲಿ ಅನುಷ್ಠಾನಗೊಂಡ ಅಥವಾ ಅನುಷ್ಠಾನ ಗೊಳ್ಳದ ಕಾಮಗಾರಿಗಳ, ಖರೀದಿಗಳ ಮತ್ತು ಬಟವಾಡೆಗಳ ವಿವರಗಳನ್ನು ಒದಗಿಸುವುದು;

ಇ) ಕೈಗೊಂಡ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ವರದಿ ಹಾಗೂ ಕಾರ್ಯಕ್ರಮಗಳ ಬಾಬ್ತು ಬಿಲ್ಲು ಪಾವತಿ ಮಾಡಿದ ದಿನಾಂಕ ಸಹಿತ ವಿವರ ನೀಡುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

ಇ) ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ.